ಖರ್ಚು, ತರಕಾರಿ, ಅಮ್ಮನ ಗುಳಿಗೆ, ಮಕ್ಕಳ ಖರ್ಚು, ವಿಮೆ, ಸಾಲದ ಕಂತು ಎನ್ನುತ್ತ ದುಡಿದ ಹಣ ಹತ್ತಾರು ದಾರಿ ಹಿಡಿದು ಕಟ್ಟಕಡೆಗೆ ಗಳಿಸಿದ್ದರಲ್ಲಿ ಉಳಿಯುವುದೆಷ್ಟು? ಎಂಬ ಪ್ರಶ್ನೆ ಕಾಡತೊಡಗುತ್ತದೆ. ದಿನಗೂಲಿಗಳಂತೂ ಸೊಳ್ಳೆಕಡಿತದ ವಾತಾವರಣದಲ್ಲಿ ಕೆಟ್ಟ ನೀರು ಕುಡಿಯುತ್ತ ರೋಗಸಂಕಟದಲ್ಲಿ ಬಳಲುತ್ತ ಬದುಕು ಕಟ್ಟಿಕೊಂಡವರು. ಅಡುಗೆ ಕೆಲಸ, ನೆಲ ಒರೆಸುತ್ತ ಹೊತ್ತಿನ ತುತ್ತು ಕಂಡ ಹೆಂಗಳೆಯರು ಅಸಂಖ್ಯ. ವಿಶ್ವಾಸದಿಂದ ಇಷ್ಟು ವರ್ಷ ಕೆಲಸ ಮಾಡುತ್ತಿದ್ದವರನ್ನು ಕೊರೊನಾ ಕಾರಣಕ್ಕೆ ಮನೆಗೆ ಕರೆಯಲು ಯಾರೂ ಸಿದ್ಧರಿಲ್ಲ, ಹೊರ ಹೋಗುವುದಕ್ಕೆ ಇವರಿಗೂ ಸಾಧ್ಯವಿಲ್ಲ.

**ಕೊರೊನಾ ಮೂಡಿಸಿದ ಗ್ರಾಮ ಮರುವಲಸೆ**

ನಗರದಲ್ಲಿ ಬಹುತೇಕ ಎಲ್ಲರೂ ಮುಖ್ಯ ರಸ್ತೆ, ಕವಲು ದಾರಿಯೆಂಬ ಪರಿಚಿತ ನೆಲೆಯ ಅಪರಿಚಿತ ಜನಗಳಲ್ಲವೇ? ಊರಿನಂತೆ ಬಿದ್ದರೆ ಮೇಲೆತ್ತುವವರು, ನಗುವವರು, ಗೆದ್ದರೆ ಸಂಕಟಪಡುವವರು, ಜಾತಿ–ಜಾತಕ ತೆಗೆದು ದೂರವಿಡುವವರಿಲ್ಲ. ಚೋಟುದ್ದ ವಿಷಯಕ್ಕೆ ಜಗಳ ಕಾಯುತ್ತ ಮುಖಮುಚ್ಚಿಕೊಂಡು ನಿಲ್ಲಬೇಕಿಲ್ಲ. ಸೊಸೆಗೆ ಅತ್ತೆಯ ಮಾತಿಲ್ಲ, ಮಗನಿಗೆ ಅಪ್ಪನ ಬೈಯ್ಗುಳಕ್ಕೆ ಅವಕಾಶ ಕಡಿಮೆ. ಸಹೋದರರ ತಿಕ್ಕಾಟ, ನಾದಿನಿಯ ಟೀಕೆಗಳೂ ದೊಡ್ಡ ದನಿಯಲ್ಲಿ ಕೇಳಿಸುವುದಿಲ್ಲ. ತಮ್ಮ ಪಾಡಿಗೆ ನಾವಿದ್ದರೆ ಅಕ್ಕಪಕ್ಕದವರೂ ಜೊತೆಗಿದ್ದೂ ಇಲ್ಲದವರಂತೆ ಬದುಕು. ಹೊಲದ ಬಿಸಿಲು, ಭೀಕರ ಬರದ ನಷ್ಟ, ದುಡಿಮೆಯ ಕಷ್ಟಕ್ಕಿಂತ ಕೊಂಚ ನಿರಾಳ ಗೇಯ್ಮೆ ನಗರದ್ದು. ಒಟ್ಟಿನಲ್ಲಿ ಕೆಲಸದ ಘನತೆ ದೊಡ್ಡದೆಂಬ ಲೆಕ್ಕಾಚಾರ! ಪ್ರವಾಹ ಬರಲಿ, ನೆರೆ ನುಗ್ಗಲಿ, ನಿಶ್ಚಿತ ದುಡಿಮೆಯಿದೆ, ನಿರಂತರ ಆದಾಯವಿದೆ. ಬಡವರು, ಮಧ್ಯಮವರ್ಗ, ಶ್ರೀಮಂತರೆಲ್ಲರಿಗೂ ನಗರ ವರ್ತುಲದಲ್ಲಿ ತಮ್ಮದೇ ಪ್ರಪಂಚ ಕಟ್ಟಿಕೊಂಡ ದಾರಿಗಳಿವೆ. ಸಂಪೂರ್ಣ ವ್ಯಾಪಾರ ವಹಿವಾಟು ಕುಸಿದು 'ವರ್ಕ್ ಫ್ರಂ ಹೋಂ' ಎಂದಿದ್ದ ಹಲವು ಕಂಪನಿಗಳು ಕೊನೆ ಕೊನೆಗೆ ಕೈಚೆಲ್ಲಿದವು. ನಿರ್ಮಾಣ ಕಾಮಗಾರಿಗಳು ನಿಂತವು. ಮುಂದೇನು ಮಾಡಬೇಕೆಂದು ಗೊತ್ತಿಲ್ಲದೇ ಖಾಸಗಿ ಕಂಪನಿಗಳ ಬೃಹತ್ ಯೋಜನೆಗಳು ಸರಕು ಸಾಮಗ್ರಿಗಳ ಪೂರೈಕೆಯಿಲ್ಲದೇ ಆಮೆಗತಿಯಾದವು. ಈಗ ಇಲ್ಲಿ ಕೆಲಸವಿಲ್ಲ ಎಂಬುದು ಪ್ರಶ್ನೆಯಲ್ಲ, ಕಾಯಿಲೆಯ ಗೂಡಿನಲ್ಲಿ ಬದುಕು ಸುರಕ್ಷಿತವಿಲ್ಲದ ಭಯ ವಲಸೆಯ ಮೂಲವಾಗಿದೆ.



## ಗೂಡು ಸೇರಿದವರು

**ಕೊರೊನಾ ಸೋಂಕಿನ ಆತಂಕದಿಂದಾಗಿ ಉಂಟಾದ ಆರ್ಥಿಕ ಬಿಕ್ಕಟ್ಟಿನಿಂದ ಕಂಗೆಟ್ಟು ಲಕ್ಷಾಂತರ ಕಾರ್ಮಿಕರು ತಂತಮ್ಮ ಊರುಗಳಿಗೆ ಹಿಂತಿರುಗಿದ್ದಾರೆ. ಬೆಂಗಳೂರು ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಹಳ್ಳಿಗಳಿಗೆ ವಾಪಸ್ಸಾಗಿರುವವರ ಸಂಖ್ಯೆ ಸುಲಭ ಲೆಕ್ಕಕ್ಕೆ ಸಿಗುವಂತಹದ್ದಲ್ಲ. ಜಿಲ್ಲಾಡಳಿತಗಳ ಅಂಕಿಅಂಶಗಳ ಪ್ರಕಾರ ಆಯಾ ಜಿಲ್ಲೆಗಳಿಗೆ ಹಿಂತಿರುಗಿದವರ ಅಂದಾಜು ಸಂಖ್ಯೆ ಹಾಗೂ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಅಥವಾ 'ಜಾಬ್ ಕಾರ್ಡ್' ಪಡೆದವರ ಮಾಹಿತಿ ಇಲ್ಲಿದೆ.**

| ಜಿಲ್ಲೆ | ಮರಳಿದವರು | ಕೆಲಸ ಪಡೆದವರು |
|---|---|---|
| ಕೊಡಗು | 5,800 | 13,945 |
| ಹಾಸನ | 76,465 | 44,126 |
| ಚಾಮರಾಜನಗರ | 1,819 | 50,000 |
| ಮಂಡ್ಯ | 23,000 | 5,397 |
| ಚಿಕ್ಕಮಗಳೂರು | 21,000 | 4,858 |
| ಉಡುಪಿ | 25,000 | 4,000 |
| ದಕ್ಷಿಣ ಕನ್ನಡ | 30,000 | 3,000 |
| ಚಿತ್ರದುರ್ಗ | 77,935 | 8,631 |
| ದಾವಣಗೆರೆ | 30,188 | 13,718 |
| ಶಿವಮೊಗ್ಗ | 42,000 | 24,527 |
| ತುಮಕೂರು | ಲಭ್ಯವಿಲ್ಲ | 9,848 |
| ಕೋಲಾರ | ಲಭ್ಯವಿಲ್ಲ | 20,000 |
| ಚಿಕ್ಕಬಳ್ಳಾಪುರ | 1,500* | 800 |
| ರಾಯಚೂರು | 60,726 | 14,697 |
| ಕೊಪ್ಪಳ | 14,000 | 2,000 |
| ಬೀದರ್ | 27,000 | 10,000 |
| ಯಾದಗಿರಿ | 26,155 | 17,468 |
| ಕಲಬುರ್ಗಿ | 4,468 | 40,671 |
| ಹಾವೇರಿ | 27,276 | 3,273 |
| ಉತ್ತರ ಕನ್ನಡ | 6250 | 108 |
| ಗದಗ | 4,112 | 2,712 |
| ಧಾರವಾಡ | 2,872 | 1,919 |
| ಬಾಗಲಕೋಟ | 23,760 | 8,500 |
| ಬೆಳಗಾವಿ | 1,00,000+ | 30,000 |
| ವಿಜಯಪುರ | 39,385 | 14,832 |

* ಕುಟುಂಬ